ಸತ್ತವರ ಸಂಖ್ಯೆ, ಅಷ್ಟೇ ಯಾಕೆ ಮಂಗನೇ ಹೀರೋ ಆಗಿದ್ದ ಸಿನಿಮಾ ಕೂಡ ಹರಿದಾಡಿತು...

'ತಹಶೀಲ್ದಾರ್, ಸಾಗರ ತಾಲ್ಲೂಕು' ಎಂಬ ಬೋರ್ಡಿನ ಜೀಪಿನಲ್ಲಿ ಶ್ರೀಮಠಕ್ಕೆ ಬಂದ ಅಧಿಕಾರಿಯೊಬ್ಬರು, 'ಇಲ್ಲಿ ಮ್ಯಾನೇಜರ್ ಯಾರು?' ಎಂದು ಕೇಳುತ್ತಲೇ, ಎರಡು ಮೂರು ಕೈಗಳು ರಾಜಾರಾಮನನ್ನು ತೋರಿಸಿದವು; ಅವರೆಲ್ಲರೂ ಏನು ನಡೆಯುತ್ತಿದೆ ಎಂದು ಅರ್ಥಮಾಡಿಕೊಳ್ಳುವಷ್ಟರಲ್ಲಿ ಜೀಪು, ಸಾಗರದ ರಸ್ತೆ ಹಿಡಿದಾಗಿತ್ತು. ಬಾಲ ಮುದುರಿ ಕುಳಿತ ರಾಮನ ಬಂಟನನ್ನು ಕೂರಿಸಿಕೊಂಡು!

ಇನ್ನೇನು ಮಾಧ್ಯಮದಲ್ಲಿ ಇದರ ಕಾವು ಇಳಿಯುತ್ತಿದೆ ಅನ್ನುವಷ್ಟರಲ್ಲಿ ಎಲ್ಲಾ ಚಾನಲ್‌ಗಳಲ್ಲೂ ರಾಜಾರಾಮನೆಂಬ ವ್ಯಕ್ತಿಯನ್ನು ಈ ವಿಚಾರಕ್ಕೆ ಸಂಬಂಧಿಸಿದಂತೆ ಅರೆಸ್ಟ್ ಮಾಡಿದ್ದಾಗಿ ಮುಖ್ಯ ಮಂತ್ರಿಯವರೇ ಹೇಳಿಕೆ ಕೊಟ್ಟು ಪ್ರಕರಣಕ್ಕೆ ತೆರೆ ಎಳೆದರು. ಅದರ ನಂತರ ಅರಣ್ಯ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಕೊನೆಯಲ್ಲಿ ಶ್ರೀಮಠದ ಸ್ವಾಮೀಜಿಯವರೂ ಇದನ್ನು ಅನುಮೋದಿಸಿದರು...

ಪೊಲೀಸರು, ವಕೀಲರು, ಸರ್ಕಾರಿ ಅಧಿಕಾರಿಗಳು ಪರಿಸರ ಪ್ರೇಮಿಗಳು, ಮಾಧ್ಯಮದವರು... ಹೀಗೆ ಎಲ್ಲರಿಂದ ರೋಸಿಹೋಗಿದ್ದ ರಾಜಾರಾಮನು ಅಂತೂ ಒಂದು ತಿಂಗಳ ನಂತರ ತನ್ನ ಮುಷ್ಟಿಯಲ್ಲಿ ಜೀವ ಹಿಡಿದುಕೊಂಡು, ಹೆಂಡತಿಯೊಂದಿಗೆ ಬೆಂಗಳೂರಿನಲ್ಲಿದ್ದ ತಮ್ಮ ಶಾಂತಾರಾಮನ ಮನೆಗೆ ಬಂದ.

"ಶಾಂತೂ, ನನಗೆ ನವಿಲೆಸರದ ಋಣ ತೀರ್ತು ಅನ್ನಿಸ್ತಾ ಇದೆ ಕಣೋ. ಹೀಗೆ, ನಾವು ಹುಟ್ಟಿ ಬೆಳೆದ ಊರಿನ ಸೂತ್ರವನ್ನು ಕಡಿದು ಹಾಕಿಕೊಳ್ಳೋದು ಸುಲಭ ಅಲ್ಲ ಅನ್ನೋದೂ ನಂಗೊತ್ತು. ಆದರೆ, ನನ್ನ ಮಗಳದ್ದು ದಿನಾ ಫೋನಲ್ಲಿ ಒಂದೇ ವರಾತ: 'ಅಪ್ಪಯ್ಯಾ, ನೀನು ಆ ಊರು ಬಿಟ್ಟು ನಮ್ಮ ಜೊತೆ ಬಂದು ಇದ್ದುಬಿಡು.' ನೋಡು ಶಾಂತು, ಊರು ನಮ್ಮದು; ಅಲ್ಲಿ ಇಂತಾದ್ದೆಲ್ಲಾ ಇದ್ದೇ ಇರ್ತಾವೆ. ಅಷ್ಟಕ್ಕೆಲ್ಲಾ ಊರನ್ನೇ ಬಿಡೋಕಾಗುತ್ತಾ? ಬಂದೇಬಿಟ್ಟೆ ಅಂದ್ಕೋ, ಆದರೆ, ಆ ಶ್ರೀರಾಮನನ್ನ ಅಲ್ಲಿ ಬಿಟ್ಟು ನಾನು ಇಲ್ಲಿ ಬದುಕೋದು ಹ್ಯಾಗೆ ಮಾರಾಯ?"

ಅಣ್ಣನ ಮಾತನ್ನು ಕೇಳಿದ ಶಾಂತಾರಾಮ ನುಗ್ಗಿ ಬಂದ ನಗುವನ್ನು ಹಿಂದಿಕ್ಕಿ ಕೇಳಿದ:

"ಅಲ್ಲ ರಾಜಣ್ಣಾ, ಶ್ರೀಮಠದ ಸ್ವಾಮೀಜಿಯವರು ಬೆಂಗಳೂರನ್ನೇ ವೈಕುಂಠ ಅಂದ್ಕೊಂಡು ಆರು ತಿಂಗಳಿಂದ ಇಲ್ಲೇ ಇದ್ದಾರೆ; ನಿಂಗೆ ಇರೋಕ್ಕೆ ಆಗೋಲ್ವಾ?"

ಅರೆ! ಹೌದಲ್ಲವೆ? ಎಂಬ ಅಚ್ಚರಿಯಲ್ಲಿ ತಮ್ಮನ ಮುಖ ನೋಡಿದ ರಾಜಾರಾಮ.

## ಅಲಕ ತೀರ್ಥಹಳ್ಳಿ

'ಅಲಕ ತೀರ್ಥಹಳ್ಳಿ' ಎಂಬ ಹೆಸರಿನಲ್ಲಿ ಕತೆಗಳನ್ನು ಬರೆಯುವ ಎಚ್.ವಿ. ಲಕ್ಷ್ಮೀನಾರಾಯಣ ಅವರು ಹುಟ್ಟಿದ್ದು ಸಾಗರ ಸಮೀಪದ ಹೂಗೊಪ್ಪಲು ಎಂಬ ಪುಟ್ಟ ಹಳ್ಳಿಯಲ್ಲಿ. ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರು. 'ಈ ಕಥೆಗಳ ಸಹವಾಸವೇ ಸಾಕು' ಮತ್ತು 'ನವಿಲೆಸರ' ಅವರ ಕಥಾಸಂಗ್ರಹಗಳು. ಅನೇಕ ನಾಟಕಗಳನ್ನು, ಕವಿತೆಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.